# ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಫೋನ ನಂಬರ:-221830/256950
ಫ್ಯಾಕ್ಸ್ ನಂಬರ:-256403
ಇ-ಮೇಲ:- seeonmcrl@gmail.com

ಅಧೀಕ್ಷಕ ಅಭಿಯಂತರರು (ವಿ), ರವರ ಕಛೇರಿ,
ಕಾರ್ಯ ಮತ್ತು ಪಾಲನೆ ವೃತ್ತ,
ಗು.ವಿ.ಸ.ಕಂ.ನಿ, ಕಲಬುರಗಿ.

ಅ.ಅ.(ಕಾಮತ್ತು ಪಾವೃತ್ತ)/ಗು/ಕಾನಿಅ(ಕ)/ಸ.ಕಾ.ನಿ.ಅ.-2/ಕಿಅ-1/ಎಫ್-123/19-20/6458 ದಿನಾಂಕ: 14 OCT 2019

## ಗ್ರಾಹಕರ ಸಂವಾದ ಸಭೆಯ ನಡಾವಳಿಗಳು

ದಿನಾಂಕ 16.09.2019 ರಂದು ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಜೆಸ್ಕಾಂ ಕಲಬುರಗಿ/ ಕಾರ್ಯನಿರ್ವಾಹಕ ಅಭಿಯಂತರರು (ವಿ),ಕಾ ಮತ್ತು ಪಾ ವಿಭಾಗ-2, ಕಲಬುರಗಿ ರವರ ಅಧ್ಯಕ್ಷತೆಯಲ್ಲಿ ಚಿತ್ತಾಪೂರ ಉಪ-ವಿಭಾಗದ ಕಛೇರಿಯಲ್ಲಿ ಗ್ರಾಹಕರ ಸಂವಾದ ಸಭೆಯನ್ನು ನಡೆಸಲಾಯಿತು.

### ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

1. ಶ್ರೀ ಮಠಪತಿ ಕಾರ್ಯನಿರ್ವಾಹಕ ಅಭಿಯಂತರರು(ವಿ)., ಕಾ ಮತ್ತು ಪಾ ವಿಭಾಗ, ಜೆಸ್ಕಾಂ ಕಲಬುರಗಿ.
2. ಶ್ರೀ ಭರತ ಚವ್ಹಾಣ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಉಪ-ವಿಭಾಗ, ಚಿತ್ತಾಪೂರ.
3. ಕು. ಶಿಲ್ಪಾ ಹಿರಿಯ ಸಹಾಯಕರು ಚಿತ್ತಾಪೂರ.
4. ಶ್ರೀ ಪ್ರಾಣೇಶ ಶಾಖಾಧಿಕಾರಿ, ಚಿತ್ತಾಪೂರ
5. ಶ್ರೀ ಜಗನ್ನಾಥ ಶಾಖಾಧಿಕಾರಿ, ಅಳ್ಳೋಳ್ಳಿ.
6. ಶ್ರೀ ಲಕ್ಷ್ಮಣ ಶಾಖಾಧಿಕಾರಿ, ರಾವೂರ.
7. ಶ್ರೀ ಅಂಬರೇಶ ಶಾಖಾಧಿಕಾರಿ, ಗ್ರಾಮೀಣ.

ಸಭೆಯಲ್ಲಿ ಚರ್ಚೆ ಮಾಡಿದ ಸಮಸ್ಯೆಗಳ ವಿವರ ಈ ಕೆಳಗಿನಂತಿವೆ.

1. ಚಿತ್ತಾಪೂರ ಪಟ್ಟಣದ ಗ್ರಾಹಕರಾದ ಶ್ರೀ ರಾಜೇಂದ್ರ ದೇಶಮುಖ ಹಾಗೂ ಮಕ್ಕಾದ ದಿಗ್ಗಾಂವ-ಸಾತನೂರ ಫೀಡರಿನ ಮೇಲೆ ಬರುವ 63ಕೆ.ವಿ.ಎ ಪರಿವರ್ತಕದ ಎಲ್.ಟಿ ಮಾರ್ಗ ತುಂಬಾ ಜೊತು ಬಿದ್ದು, ಇದರಿಂದಾಗಿ ದಿನನಿತ್ಯ ವಿದ್ಯುತ್ ಸರಬರಾಜಿನಲ್ಲಿ ತೊಂದರೆಯಾಗುತ್ತಿ ಎಂದು ತಿಳಿಸಿರುತ್ತಾರೆ.
   ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ)., ರವರು ಉತ್ತರಿಸುತ್ತಾ ಸಂಬಂಧಪಟ್ಟ ಶಾಖಾಧಿಕಾರಿಗೆ ಸ್ಥಳ ಪರೀಶೀಲಿಸಿ ಆದಷ್ಟು ಬೇಗ ಸಮಸ್ಯೆಯನ್ನು ಬಗೆಹರಿಸಬೇಕೆಂದು ಸೂಚಿಸಲಾಯಿತು.

2. ಪ್ರಕಾಶ ತಂದೆ ಜ್ಞಾನಮಿತ್ರ ಮು : ಬೀಮನಳ್ಳಿರವರ ಮನೆಯ ಹತ್ತಿರದಿಂದ ಎಲ್.ಟಿ ಮಾರ್ಗ ಹಾದು ಹೊಗಿರುತ್ತದೆ, ಇದರಿಂದಾಗಿ ವಿದ್ಯುತ್ ಅಪಘಾತವಾಗುವ ಸಂಭವ ವಿರುತ್ತದೆ, ಆದ್ದರಿಂದ ಸದರಿ ಮಾರ್ಗವನ್ನು ಸ್ಥಳಾಂತಿಸಲು ಕೋರಿದರು.
   ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ)., ರವರು ತಿಳಿಸುತ್ತಾ ಶಾಖಾಧಿಕಾರಿಯವರಿಗೆ ಸ್ಥಳ ಪರೀಶಿಲಿಸಿ ಕೆ.ಇ.ಆರ್.ಸಿ ನಿಯಮಾವಳಿ ಪ್ರಕಾರ ಅಂದಾಜು ಪಟ್ಟಿ ಸಲ್ಲಿಸಲು ಸೂಚಿಸಲಾಯಿತು.

3. ಮಲ್ಲಯ್ಯಾ ತಂದೆ ಅಂಬಣ್ಣಾ ಮು ಕೆ.ನಾಗಾಂವ ರಸ್ತೆಯ ಸ್ಥಾವರ ಸಂಖ್ಯೆ CIP28084 ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವಿದ್ಯುತ ಮಾರ್ಗ ನಿರ್ಮಾಣವಾಗಿದ್ದು, ಆದರೆ ಕೇವಲ ಮೂರು ತಿಂಗಳಿನಲ್ಲಿ ಸೂಮಾರು 7 ಕಂಬಗಳು ಬಿದ್ದಿರುತ್ತವೆ ಎಂದು ದೂರು ನೀಡಿದರು.
   ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ)., ರವರು ಉತ್ತರಿಸುತ್ತಾ ಕಿರಿಯ. ಅಭಿಯಂತರರು(ತಾಂತ್ರಿಕ)ರವರಿಗೆ ವಿಭಾಗಿಯ ಕಾಮಗಾರಿ ಘಟಕಕ್ಕೆ ದೂರಿನ ವಿಷಯ ತಿಳಿಸಲು ಸೂಚಿಸುತ್ತಾ, ಶಾಖಾಧಿಕಾರಿ ಚಿತ್ತಾಪೂರವರಿಗೆ, ಸದರಿ ಮಾರ್ಗದ ಕಂಬಗಳನ್ನು ಸರಿಪಡಿಸಲು ಸೂಚಿಸಲಾಯಿತು.

Scanned with CamScanner

4. ಮಾಹಾದೇವ ಪೂಜಾರಿರವರು ಭಾಹಾರಪೇಟ್ ಏರಿಯಾದಲ್ಲಿ ಐ.ಪಿ.ಡಿ.ಎಸ್. ಯೋಜನೆಯಲ್ಲಿ ನಿರ್ಮಾಣ ಮಾಡಲಾದ ಪರಿವರ್ತಕಕ್ಕೆ ಬೇಲಿ ಹಾಕಿರುವದಿಲ್ಲಾ, ಇದರಿಂದಾಗಿ ಜನರಿಗೆ ಅಪಘಾತವಾಗಬಹುದು, ಸದರಿ ಪರಿವರ್ತಕಕ್ಕೆ ಬೇಲಿ ಹಾಕಲು ಕೋರಿದರು.

ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ)., ರವರು ಉತ್ತರಿಸುತ್ತಾ ಶಾಖಾಧಿಕಾರಿ ಚಿತ್ತಾಪೂರವರಿಗೆ ಪರಿವರ್ತಕಕ್ಕೆ ಬೇಲಿ ಹಾಕಲು ಅಂದಾಜು ಪಟ್ಟಿ ತೈಯಾರಿಸಲು ಸೂಚಿಸಲಾಯಿತು.

5. ಶಶಿಕುಮಾರ ರಾಮತಿರ್ಥರವರ ಮನೆಯ ಮೇಲಿಂದ ಎಲ್.ಟಿ ವಿದ್ಯುತ್ ಮಾರ್ಗ ಹಾದುಹೋಗಿರುತ್ತದೆ, ಎಂದು ಮನವಿ ಮಾಡಿಕೊಂಡರು.

ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ)., ರವರು ಉತ್ತರಿಸುತ್ತಾ ಸದರಿ ಮಾರ್ಗವನ್ನು ಸ್ಥಳಾಂತರಿಸಲು ಶಾಖಾಧಿಕಾರಿಯವರಿಗೆ ತಿಳಿಸಿದರು ಹಾಗೂ ಅಂದಾಜು ಪಟ್ಟಿಯನ್ನು ಸಲ್ಲಿಸಲು ಸೂಚಿಸಲಾಯಿತು.

6. ಮಾಣಿಕಮ್ಮಾ ಗಂಡ ಶಿವಶರಣಪ್ಪಾರವರ ತೋಟದಲ್ಲಿ ಕಂಬಗಳು ಬಾಗಿರುತ್ತವೆ, ಹಾಗೂ ಎರಡು ಕಂಬಗಳ ನಡುವೆ ಅಂತರ ಬಹಳ ಇರುವದರಿಂದ ವಿದ್ಯುತ್ ಮಾರ್ಗದ ವಾಹಕ ಜೊತು ಬಿದ್ದಿರುತ್ತದೆ, ಹಾಗೂ ಸದರಿ ಮಾರ್ಗದ ನಡುವೆ ಕಂಬಗಳು ಹಾಕಿ ಮಾರ್ಗವನ್ನು ಸರಿಪಡಿಸಲು ಕೋರಿರುತ್ತಾರೆ,

ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ)., ರವರು ಉತ್ತರಿಸುತ್ತಾ ಶಾಖಾಧಿಕಾರಿಯವರಿಗೆ ಸದರಿ ಮಾರ್ಗವನ್ನು ಸರಿಪಡಿಸಿ, ಅಚಿದಾಜು ಪಟ್ಟಿ ತಯಾರಿಸಿ ಕಾಮಗಾರಿಯನ್ನು ಆದಷ್ಟು ಬೇಗನೆ ಮುಗಿಸಲು ತಿಳಿಸಲಾಯಿತು.

ಸಭೆಯ ಅಂತ್ಯದಲ್ಲಿ ಭಾಗವಹಿಸಿದ ಎಲ್ಲಾ ಗ್ರಾಹಕರಿಗೆ ವಿದ್ಯುತ್ ಬಳಸುವಾಗ ಸುರಕ್ಷತೆಯ ಬಗ್ಗೆ ಗಮನ ಹರಿಸಲು ತಿಳಿಸಲಾಯಿತು, ಹಾಗೂ ಈ ಮೇಲೆ ನಮೂದಿಸಿದ ಎಲ್ಲಾ ಕುಂದು ಕೊರತೆಗಳನ್ನು ಆದಷ್ಟು ಬೇಗನೆ ಪರಿಹರಿಸಲಾಗುವುದು, ಎಂದು ತಿಳಿಸಿ ವಂದನೆಗಳನ್ನು ಸಲ್ಲಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ

ಅಧೀಕ್ಷಕ ಅಭಿಯಂತರರು (ವಿ)
ಕಾ ಮತ್ತು ಪಾ ವೃತ್ತ
ಗು.ವಿ.ಸ.ಕಂ.ನಿ,ಕಲಬುರಗಿ

14/10.

**ಪ್ರತಿಗಳು:**

ಮುಖ್ಯ ಇಂಜಿನಿಯರ್ (ವಿದ್ಯುಚ್ಛಕ್ತಿ) , ಕಾ ಮತ್ತು ಪಾ ವಲಯ, ಜೆಸ್ಕಾಂ, ಕಲಬುರಗಿ ರವರ ದಯಾಪರ ಮಾಹಿತಿಗಾಗಿ.

Scanned with CamScanner